ಕೆಲವೊಮ್ಮೆ ಅನಿರೀಕ್ಷಿತ ಕಾರಣಗಳಿಗಾಗಿ ಅನಿಯಮಿತ ಲೋಡ್ ಶೆಡ್ಡಿಂಗ್‌ನ್ನು ಮಾಡಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ, ವಿದ್ಯುತ್ ಬಳಕೆದಾರರಿಗೆ ಹೆಚ್ಚು ಅನಾನುಕೂಲವಾಗದಂತೆ ಆದಷ್ಟು ಕಡಿಮೆ ಅವಧಿಗೆ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸಲಾಗುವುದು.

ವಿಷಯ: ಕೃಷಿ ಉತ್ಪನ್ನಗಳ ಮಾರಾಟ ಸಮಿತಿಗೆ ಚುನಾವಣೆ ನಡೆಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1539 (2184)

ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ):- ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ ಕೃಷಿ ಉತ್ಪನ್ನಗಳ ಮಾರಾಟ ಸಮಿತಿಗೆ ಚುನಾವಣೆ ನಡೆಸುವ ಆಲೋಚನೆ ಸರ್ಕಾರಕ್ಕಿದೆಯೆ.

ಆ ಹಾಗಿದ್ದಲ್ಲಿ, ಎಷ್ಟು ಸಮಯ ದೊಳಗಾಗಿ ಚುನಾವಣೆಗಳನ್ನು ನಡೆಸಲಾಗುವುದು.

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು)-

ಅ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ 1966ಕ್ಕೆ ಕರ್ನಾಟಕ ಕಾಯ್ದೆ ಸಂಖ್ಯೆ: 16: 1991ರ ಮೂಲಕ ತಿದ್ದುಪಡಿ ಮಾಡಿದ್ದರಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿ) ನಿಯಮಾವಳಿ 1968ರ ಚುನಾವಣೆಗೆ ಸಂಬಂಧಿಸಿದ ನಿಯಮಗಳ ತಿದ್ದುಪಡಿ ಸರ್ಕಾರದ ಪರಿಶೀಲನೆಯಲ್ಲಿದೆ. ಮಾರುಕಟ್ಟೆ ಕ್ಷೇತ್ರದ ವಿವರಣೆ ತಿದ್ದುಪಡಿ ಮಾಡಿರುವ ಪ್ರಯುಕ್ತ ಕೆಲವೊಂದು ಮಾರುಕಟ್ಟೆ ಸಮಿತಿಗಳ ಕ್ಷೇತ್ರ ಸಂಯೋಜನೆ:ವಿಭಜನೆ:ಮಾರುಕಟ್ಟೆ ಕ್ಷೇತ್ರಗಳ ಬದಲಾವಣೆ ಸಹ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಇದಾದನಂತರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಚಾನಾವಣೆ ದಿನಾಂಕದ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದು.

ವಿಷಯ: ಸಹಕಾರಿ ಸಂಘಗಳ ಬೆಳೆ ಸಾಲದ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1541 (2187)

ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ):- ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ 1987-88ರಿಂದ ಇಲ್ಲಿಯವರೆಗೆ ಸಹಕಾರ ಸಂಘಗಳ ಮೂಲಕ ಕೊಟ್ಟಿರುವ ಅಲ್ಪಾವಧಿ ಬೆಳೆ ಸಾಲ ಎಷ್ಟು (ವರ್ಷವಾರು ವಿವರಗಳನ್ನು ನೀಡುವುದು)

ಆ ಇದರಲ್ಲಿ ಇಲ್ಲಿಯವರೆಗೆ ಶೇಕಡಾ ಎಷ್ಟು ವಸೂಲಿ ಆಗಿದೆ. (ವರ್ಷವಾರು ವಿವರಗಳನ್ನು ನೀಡುವುದು)

ಇ ಅಲ್ಪಾವಧಿ ಸಾಲವನ್ನು ಇಲ್ಲಿಯವರೆಗೆ ಹಿಂತಿರುಗಿಸಿದವರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ.

ಈ ಹಾಗಿದ್ದಲ್ಲಿ, ಸಾಲ ವಸೂಲಿಗಾಗಿ ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು)-

ಅ ರೂ.71,928-97 ಲಕ್ಷಗಳು

ವರ್ಷ (ಸಹಕಾರಿ)	ರೂಪಾಯಿ ಲಕ್ಷಗಳಲ್ಲಿ
1987-88	23359.47
1988-89	24806.82
1989-90	14907.80
1990-91	5892.62
1991-31.1.92	2962.26

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ನೀಡಿದ ಅಲ್ಪಾವಧಿ ಸಾಲ.

ಆ	ವರ್ಷ	ಶೇಕಡ ವಸೂಲಾತಿ
	1987-88	79.00
	1988-89	67.26
	1989-90	27.18
	1990-91	35.92
	1991-92,31.3.92ರ ವರೆಗೆ	9.30

ಇ ಹೆಚ್ಚಿನ ಪ್ರಕರಣಗಳಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ. ಬಾಕಿ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ 1. ಸಾಲಗಾರರನ್ನು ಭೇಟಿ ಮಾಡಿ ವಸೂಲಾತಿಗೆ ಮನವಿ ಮಾಡುವುದು.

2. ಸಾಲ ವಸೂಲಾತಿ ಕೋರಿ ನೋಟೀಸು ಕೊಡುವುದು.

3. ಸಾಲ ವಸೂಲಾತಿಗಾಗಿ ಸಿವಿಲ್ ಕೇಸು ಹಾಕುವುದು.

4. ವಸೂಲಾತಿ ಉತ್ತೇಜಿಸಿ "ಕೃಷಿ ಉತ್ಪಾದನಾ ಉತ್ತೇಜನ ಯೋಜನೆ" ಜಾರಿಗೆ ತಂದಿರುವುದು.

ವಿಷಯ: ರಾಜ್ಯದಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಮತ್ತು ಮುನ್ಸಿಫ್ ಹಾಗೂ ಎ.ಪಿ.ಪಿ. ಜಾಗಗಳನ್ನು ಬೇಗನೆ ತುಂಬುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1542 (2225)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ರಾಜ್ಯದಲ್ಲಿ ಜಿಲ್ಲಾ ನ್ಯಾಯಾಧಿಶರ ಹಾಗೂ ಮುನ್ಸಿಫ್ ಹಾಗೂ ಎ.ಪಿ.ಪಿ. ಸ್ಥಳಗಳನ್ನು ಭಾರೀ ಪ್ರಮಾಣದಿಂದ ಖಾಲಿ ಇದ್ದದ್ದರಿಂದ ಜನರಿಗೆ ತೊಂದರೆಯಾಗಲು ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ ಹಾಗಿದ್ದಲ್ಲಿ ರಾಜ್ಯದಲ್ಲಿ ಎಷ್ಟೆಷ್ಟು ಜಿಲ್ಲಾ ನ್ಯಾಯಾಧೀಶರ ಹಾಗೂ ಮುನ್ಸೀಫ್ ಹಾಗೂ ಎ.ಪಿ.ಪಿ.ಸ್ಥಳಗಳು ಖಾಲಿ ಇರುತ್ತವೆ.

ಇ ಇವುಗಳನ್ನು ತುಂಬಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ಮತ್ತು ಎಷ್ಟು ಅವಧಿಯಲ್ಲಿ ತುಂಬಲಾಗುವುದು?

ಶ್ರೀ ಬ್ಲೇಸಿಯಸ್. ಎಂ. ಡಿಸೋಜ (ಕಾನೂನು ಸಚಿವರು)-

ಅ ಹೌದು.

ಆ 1. ಜಿಲ್ಲಾ ನ್ಯಾಯಾಧೀಶರ ಹುದ್ದೆ 18+2ರಜೆ ಮೀಸಲಾತಿ ಒಟ್ಟು 20ಹುದ್ದೆಗಳು.

2. ಮುನ್ಸಿಫ್‌ರ ಹುದ್ದೆ 27+14ರಜೆ ಮೀಸಲಾತಿ ಒಟ್ಟು 41 ಹುದ್ದೆಗಳು.

3. ಎ.ಪಿ.ಪಿ. ಹುದ್ದೆಗಳು 27 ಹುದ್ದೆಗಳು ಖಾಲಿ ಇರುತ್ತವೆ.

ಇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ: ಸಂಗೀತದ ಉಪಾಧ್ಯಾಯರುಗಳನ್ನು ನೇಮಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1543 (2226)

ಶ್ರೀ ಶಿವಾನಂದ. ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ರಾಜ್ಯದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹಾಗೂ ಸರ್ಕಾರದಿಂದ